ಬಳಲುತ್ತಿದ್ದ ಆಕೆ ಮತ್ತು ಆಕೆಯ ಸಹೋದರಿಯರು ಈ ರೀತಿ ಕೆಲಸ ಹುಡುಕಿಕೊಂಡು ಸ್ವಲ್ಪ ಮಟ್ಟಿಗೆ ಕುಟುಂಬದ ಆರ್ಥಿಕ ಸಮಸ್ಯೆಯನ್ನು ಬಗೆಹರಿಸಿಕೊಂಡರು. ಮೇಲಿಂದ ಮೇಲೆ ಕಾಡಿದ ಈ ಅನಿವಾರ್ಯತೆಗಳು, ತಾಯಿಯ ಸಾವಿನ ದುರಂತ –ಇವೆಲ್ಲ ಮೇರಿಗೆ ಜೀವನದಲ್ಲಿ ಎಲ್ಲವನ್ನೂ ಧೈರ್ಯದಿಂದ ಎದುರಿಸುವಂತಹ ದೃಢವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯ ಮಾಡಿದವು.

### ಆದರ್ಶ ವಿದ್ಯಾರ್ಥಿ

ರಷ್ಯಾದ ದಬ್ಬಾಳಿಕೆಗೆ ಒಳಗಾಗಿದ್ದ ವಾರ್ಸಾವನ್ನು ತೊರೆದು ಮೇರಿ, ಆಸ್ಟ್ರಿಯನ್ನರ ಆಳ್ವಿಕೆಯಲ್ಲಿದ್ದ ಕ್ರಾಕ್ ನಗರಕ್ಕೆ ಬಂದಳು. ಸಹೋದರಿ ಬ್ರೊನ್ಯಾ ಈ ನಡುವೆ ತನ್ನ ವೈದ್ಯಕೀಯ ಶಿಕ್ಷಣವನ್ನು ಮುಗಿಸಿ ತನ್ನ ಸಹಪಾಠಿಯನ್ನು ಮದುವೆಯಾಗಿ ಪ್ಯಾರಿಸ್‌ನಲ್ಲಿ ಕ್ಲಿನಿಕ್‌ವೊಂದನ್ನು ತೆರೆದಿದ್ದಳು. ಮೇರಿಗೆ ಈ ದಂಪತಿಗಳು ಪ್ಯಾರಿಸ್‌ಗೆ ಬರುವಂತೆ ಆಹ್ವಾನ ನೀಡಿದರು. ಹೀಗೆ ೧೮೯೧ರಲ್ಲಿ ಮೇರಿಗೆ, ಪ್ಯಾರಿಸ್‌ನ ಸೋರ್ಬೋನ್‌ನಲ್ಲಿದ್ದ ಪ್ರಖ್ಯಾತ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುವ ಅವಕಾಶ ಲಭಿಸಿತು. ಸೋದರಿಯ ಮನೆಯಿಂದ ತನ್ನ ಶಿಕ್ಷಣ ಸಂಸ್ಥೆಗೆ ಹೋಗುವ ಎರಡು ಘಂಟೆ ಪ್ರಯಾಣದ ಸಮಯವನ್ನು ಉಳಿಸಲು, ತನ್ನ ವಾಸ್ತವ್ಯವನ್ನು ಒಂದು ಮನೆಯ ಅಟ್ಟಕ್ಕೆ ಆಕೆ ವರ್ಗಾಯಿಸಿದಳು. ಅಲ್ಲಿ ಅಧ್ಯಯನಕ್ಕೆ ಸಾಕಷ್ಟು ಸಮಯ ದೊರಕುತ್ತಿತ್ತು. ಇದೊಂದೇ ಆಕೆಗೆ ಸಂತೋಷವಾದ ಸಂಗತಿಯಾಗಿತ್ತು. ಅಲ್ಲಿನ ಚಳಿ ಹೇಗಿತ್ತೆಂದರೆ ತನ್ನ ಎಲ್ಲಾ ಬಟ್ಟೆಗಳನ್ನು ಹೊದ್ದುಕೊಂಡರೂ, ಅವಳಿಗೆ ಚಳಿ ತಡೆಯಲಾಗುತ್ತಿರಲಿಲ್ಲ.

ಈ ಸಮಯದಲ್ಲಿ ಫ್ರಾನ್ಸ್‌ನ ಅತ್ಯುತ್ತಮ ಗಣಿತಜ್ಞರ ಹಾಗೂ ಭೌತಶಾಸ್ತ್ರಜ್ಞರ ಉಪನ್ಯಾಸಗಳನ್ನು ಕೇಳುವ ಅಪೂರ್ವ ಅವಕಾಶ ಅವಳಿಗೆ ಒದಗಿತು. ೧೮೯೩ರಲ್ಲಿ ಭೌತಶಾಸ್ತ್ರ ಪದವಿಯನ್ನು ಪಡೆದಾಗ ಆಕೆ ಅಲ್ಲಿನ ಎಲ್ಲ ವಿದ್ಯಾರ್ಥಿಗಳಿಗಿಂತ ಉತ್ತಮ ಮಟ್ಟದ ವಿದ್ಯಾರ್ಥಿ ಎಂದು ಪರಿಗಣಿಸಲ್ಪಟ್ಟಿದ್ದಳು. ಅನಂತರದ ವರುಷದಲ್ಲಿ ಗಣಿತಶಾಸ್ತ್ರದಲ್ಲಿ ಎರಡನೆಯವಳಾಗಿ ಆಕೆ ಉತ್ತೀರ್ಣಳಾದಳು. ಮೂರು ವರ್ಷಗಳ ಅಂತರದಲ್ಲಿ ತನ್ನ ಎಲ್ಲ ಪರೀಕ್ಷೆಗಳನ್ನೂ ಯಶಸ್ವಿಯಾಗಿ ಪೂರೈಸಿದ ಸಂತಸ ಮೇರಿಯದಾಯಿತು. ಆಕೆಯ ಮಹದಾಸೆ ಇದ್ದುದು, ಶಿಕ್ಷಣ ಡಿಪ್ಲೊಮ ಗಳಿಸಿ, ತನ್ನ ತಾಯ್ನಾಡಿಗೆ ಮರಳಿ ಹೋಗುವುದು.

ವಾರ್ಸಾವನ್ನು ತೊರೆದು ಬಂದ ಮೇರಿಗೆ ಬದುಕನ್ನು ಉತ್ತಮವಾಗಿ ಸಾಗಿಸಲು ಬೇಕಾದ ಆರ್ಥಿಕ ಭದ್ರತೆ ಇರಲಿಲ್ಲ. ಅವಳ ಸಹೋದರಿಯ ಬೆಂಬಲವಿದ್ದರೂ ಅತ್ಯಂತ ಕಠಿಣ ಸನ್ನಿವೇಶದಲ್ಲಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸ ಬೇಕಾಗಿತ್ತು. ಆಕೆಯ ಕಷ್ಟವನ್ನೂ, ವಿಜ್ಞಾನದಲ್ಲಿ ಇವಳಿಗಿರುವ ಆಸಕ್ತಿಯನ್ನೂ ಗುರುತಿಸಿ ಹಲವು ಹಿರಿಯ ಫ್ರೆಂಚ್ ವಿಜ್ಞಾನಿಗಳು ಪೋಲೆಂಡಿನ ವಿದ್ಯಾರ್ಥಿಗಳಿಗೆ ನೀಡುವ ಶಿಷ್ಯವೇತನವನ್ನು ಅವಳಿಗೆ ಕೊಡಿಸಿದರು. ಗಣಿತಶಾಸ್ತ್ರದ ಪದವಿ ಮುಗಿಸುವ ಮುನ್ನವೇ ಆಕೆ 'ಉಕ್ಕಿನಲ್ಲಿನ ಅಯಸ್ಕಾಂತೀಯ ಗುಣಲಕ್ಷಣಗಳು ಹಾಗೂ ಉಕ್ಕಿನ ರಾಸಾಯನಿಕ ರೂಪುರೇಷೆ' – ಈ ವಿಷಯದ ಬಗ್ಗೆ ಸಂಶೋಧನೆ ನಡೆಸಿದಳು. ತನ್ನೆಲ್ಲ ಸಂಶೋಧನೆಗಳನ್ನು ನಡೆಸಲು ಅನುಕೂಲಕರವಾಗಿರುವ ಪ್ರಯೋಗಾಲಯವೊಂದನ್ನು ಆಕೆ ಹುಡುಕುತ್ತಿದ್ದಳು.

೧೮೯೪ರಲ್ಲಿ ಒಬ್ಬ ಪೋಲಿಷ್ ಭೌತಶಾಸ್ತ್ರಜ್ಞನೊಡನೆ ಪ್ರಯೋಗಾಲಯದ ತುರ್ತು ಅಗತ್ಯವನ್ನು ಆಕೆ ವಿವರಿಸಿ ಹೇಳಿ ದಳು. ಸಹೃದಯಿಯಾದ ಆತನು ಇದಕ್ಕೆ ತನಗಿಂತ ಸೂಕ್ತವ್ಯಕ್ತಿಯೊಬ್ಬನನ್ನು ಪರಿಚಯಿಸುತ್ತೇನೆ ಎಂದು ಪಿಯರಿ ಕ್ಯೂರಿ ಎಂಬ ಯುವ ವಿಜ್ಞಾನಿಯನ್ನು ಆಕೆಗೆ ಪರಿಚಯಿಸಿದನು. ಈ ಪರಿಚಯ ಮುಂದೆ ವಿಜ್ಞಾನದ ನೆಲೆಯನ್ನೇ ಪರಿವರ್ತಿಸಿತು. ಪಿಯರಿ ಕ್ಯೂರಿ ಒಬ್ಬ ಆದರ್ಶವಾದಿ ಹಾಗೂ ಕನಸುಗಾರನಾಗಿದ್ದುದು ಮಾತ್ರವಲ್ಲದೆ, ಅಂತಾರಾಷ್ಟ್ರೀಯ ಮಟ್ಟದ ಭೌತಶಾಸ್ತ್ರಜ್ಞನಾಗಿದ್ದನು. ತನ್ನೆಲ್ಲ ಜೀವಿತವನ್ನೂ ವೈಜ್ಞಾನಿಕ ಕಾರ್ಯಕ್ಕೆ ಮೀಸಲಿಡುವುದೇ ಆತನ ಜೀವನಧ್ಯೇಯವಾಗಿತ್ತು. ಯಾವುದೇ ಪದವಿ, ಹಣ, ಅಧಿಕಾರ ಅಥವಾ ಹುದ್ದೆಗಳಿಗೆ ಆಸೆಪಡದ ವಿಭಿನ್ನ ವ್ಯಕ್ತಿತ್ವ ಆತನದು. ೨೭ ವರ್ಷದ ಮೇರಿ ತನಗಿಂತ ೮ ವರುಷ ಹೆಚ್ಚಿಗೆ ವಯಸ್ಸಾಗಿದ್ದ ಪಿಯರಿಯನ್ನು ಭೇಟಿಯಾಗುವ ಮೂಲಕ, ತನ್ನ ಸಂಶೋಧನೆಗೆ ಹೊಸ ದೊಂದು ಆಯಾಮವನ್ನೇ ಕಂಡುಕೊಂಡಳು.

ಇಬ್ಬರ ನಡುವಿನ ಪರಸ್ಪರ ಗೌರವಾದರಗಳು ನಂತರದ ದಿನಗಳಲ್ಲಿ ಅವರಿಬ್ಬರ ಮನಸ್ಸನ್ನು ಬೆಸೆಯುವಲ್ಲಿ ಸಫಲ ವಾದುವು. ಅವರಿಬ್ಬರಲ್ಲೂ ಇದ್ದ ವಿಜ್ಞಾನಪ್ರೇಮವು ವಿವಾಹದಲ್ಲಿ ಸಾರ್ಥಕತೆಯನ್ನು ಕಂಡುಕೊಂಡಿತು. ಪಿಯರಿಯ ಅಂತ ರಾಳದ ಮಾತುಗಳು ಮೇರಿ ತನ್ನ ಸಂಶೋಧನೆಯಲ್ಲಿ ಪೂರ್ಣವಾಗಿ ತೊಡಗಿಕೊಳ್ಳುವಂತೆ ಮಾಡಿದವು. ಪಿಯರಿ ಹೊಂದಿದ್ದ ಇನ್ನೊಂದು ಕೊಠಡಿಗೆ ತನ್ನ ಎಲ್ಲ ಸಲಕರಣೆಗಳೊಂದಿಗೆ ಆಕೆ ತೆರಳಿದಳಲ್ಲದೆ, ಅಲ್ಲಿಯೇ ಸಂಶೋಧನೆಯನ್ನೂ ಪ್ರಾರಂಭಿ ಸಿದಳು. ಈ ದಂಪತಿಗಳ ಸ್ನೇಹಿತನಾಗಿದ್ದ ಹೆನ್ರಿ ಬೆಕ್ವೆರಲ್ ಯುರೇನಿಯಂ ಧಾತುಗಳ ಗುಣಲಕ್ಷಣಗಳ ಬಗ್ಗೆ ಸಂಶೋಧನೆ ಮಾಡಬಾರದೇಕೆ ಎಂದು ಪ್ರಸ್ತಾಪಿಸಿದನು. ಇದರಿಂದ ಉತ್ತೇಜಿತಳಾದ ಮೇರಿ ಹೆಚ್ಚು ಆಸಕ್ತಿಯಿಂದ ವಿಕಿರಣ ಚಟುವಟಿಕೆಗಳ ಮೇಲೆ ಸಂಶೋಧನೆ ಮಾಡಿದಳು. ತನ್ನ ಸಂಶೋಧನಾಪ್ರಬಂಧಕ್ಕೂ ಕೂಡ ಇದೇ ವಿಷಯವನ್ನು ಆಕೆ ಆರಿಸಿಕೊಂಡಳು.

(ಮುಂದುವರಿಯುವುದು)